

ಎಸಳುಗಳನ್ನಿಟ್ಟಾಗ ಅದು ಮತ್ತಷ್ಟು ಸೊಬಗಾಗುತ್ತದೆ. ಕೇರಳದ ಹುಡುಗಿಯರ ಬಗ್ಗೆ ಸ್ವೋಪಜ್ಞವಾಗಿ ಬರೆವ ಪಂಪ ನಮ್ಮ ನಾಡ ಕನ್ನಿಕೆಯಾದ ಬೇವಿನ ಸಿರಿಸಿಂಗಾರವನ್ನು ನೋಡಲು ಇತ್ತ ಬರಲಿಲ್ಲವೇನೋ? ಮಾವಿನ ಹಸಿರಿನೊಂದಿಗೆ ಬೆಳ್ಳಿಯ ಗೆಜ್ಜೆಗಳಂತಹ ಪುಷ್ಪಮಿಶ್ರಿತ ಬೇವಿನ ಎಸಳುಗಳು ಬಾಗಿಲ ತೋರಣಕ್ಕೆ ವಿಶಿಷ್ಟ ಬಗೆಯ ಮೆರಗು ಬರೆಯುತ್ತವೆ. ಬಹುಶಃ ಬೇವು ಮತ್ತು ಹುಣಸೆ ಮಾರ್ಕ್ಸ್‌ವಾದಿಗಳಿರಬಹುದು. ಅದಕ್ಕೆಯೇ ಇವು ಸಂಪದ್ಭರಿತವಾದ ಮಲೆನಾಡಿಗೆ ಬದಲು ಬಯಲುನಾಡಿನ ಬಿರುಬೇಸಿಗೆಯಲ್ಲಿ ಶೃಂಗಾರಭರಿತವಾಗುತ್ತವೆ. ಶಿಷ್ಟ ಕವಿವಾಣಿಗಳ ಅಷ್ಟಾದಶ ವರ್ಣನೆಗಳಲ್ಲಿ ಜಾಗ ಸಿಗದಿದ್ದರೇನಂತೆ? 'ಬ್ಯಾಸಿಗೆ ಕಾಲಕ್ಕ ಬೇವಿನ ಮರತಂಪು' ಎಂದು ತಮ್ಮ ವಿಶಿಷ್ಟತೆಯನ್ನು ಜನವಾಣಿಗಳಲ್ಲಿ ಮತ್ತೆ ಮತ್ತೆ ಮನದಟ್ಟು ಮಾಡುತ್ತವೆ. ಅಂತೆಯೇ ಬಡವರ ಮನೆಯ ಕಿಟಕಿ ಬಾಗಿಲುಗಳನ್ನು ಜಾಲಿಯ, ಬೇವಿನ ತೊಲೆಗಳು ಏರುತ್ತವೆ.

ಉತ್ತರ ಕರ್ನಾಟಕದ ಜನ ಬೇರೆ ಬೇರೆ ಕಾರಣಗಳಿಗೆ ಅಭಿನಂದನಾರ್ಹರು. ಅವರು ತಮ್ಮ ಹೆಸರಿನೊಂದಿಗೆ ಇಟ್ಟುಕೊಳ್ಳುವ ಉಪನಾಮಗಳು ಅಂತಹ ಕಾರಣಗಳಲ್ಲಿ ಒಂದು. ಮಾನವನ ಹೊಟ್ಟೆಯನ್ನು ತಣಿಸುವ ಆಹಾರ ಪದಾರ್ಥಗಳನ್ನು ತಮ್ಮ ಹೆಸರಿನೊಂದಿಗೆ ಸದಾ ಸ್ಮರಿಸಿಕೊಳ್ಳುತ್ತಾರೆ. ಇಂದಿಗೂ ಜೋಳ, ಉಳ್ಳಾಗಡ್ಡಿ, ಬೆಳ್ಳುಳ್ಳಿ, ಮೆಣಸಿನಕಾಯಿ ಮುಂತಾದ ದವಸ, ಧಾನ್ಯ, ಸೊಪ್ಪು ಮತ್ತು ತರಕಾರಿಗಳ ಹೆಸರುಗಳನ್ನು ತಮ್ಮ ನಾಮಧೇಯಗಳೊಂದಿಗೆ ಧರಿಸಿ ಅಪಾರ ಮಾನ್ಯತೆಯನ್ನು ಕೊಟ್ಟಿದ್ದಾರೆ. ಅಂದಹಾಗೆ ಬೇವಿನಗಿಡವನ್ನೂ ಕೂಡ ತಮ್ಮ ಅಂಕಿತನಾಮದೊಡನೆ ಜೋಡಿಸಿಕೊಂಡು ಅದಕ್ಕೊಂದು ಮಾನವಿಕ ಮನ್ನಣೆ ಕೊಟ್ಟಿದ್ದಾರೆ. ಎಂತಲೆ ಕಪ್ಪುಮಣ್ಣಿನ ಸೀರೆಯನ್ನು ಉಟ್ಟಂತಿರುವ ಉತ್ತರ ಕರ್ನಾಟಕದ ಹೊಲಗಳ ಬದುಗಳಲ್ಲಿ ಹಸಿರು ತಳೆದ ಬೇವಿನ ಮರದ ಸಾಲುಗಳು ದಿಬ್ಬಣಕ್ಕೆ ಹೊರಟ ಮದುವಣಗಿತ್ತಿಯರಂತೆ ಮೆರವಣಿಗೆಗೆ ನಿಂತಿರುವುದನ್ನು ಕಾಣಬಹುದು.

ಬಸವಣ್ಣನವರ 'ಹಬ್ಬಕ್ಕೆ ತಂದ ಹರಕೆಯ ಕುರಿ' ಎನ್ನುವ ವಚನವನ್ನು ಕೇಳಿದ್ದೇವೆ. ಅದರಲ್ಲಿ ತೋರಣವನ್ನು ತಿನ್ನುವ ಕುರಿಯನ್ನು ಕಡಿಯುವ ಪ್ರಸಂಗದಿಂದ ಮನುಷ್ಯನ ಕ್ರೌರ್ಯ ಅನಾವರಣ ಆಗುವ